ವಾರದ ಪತ್ರ

## ನಟಿಯರಿಗೆ ಮನ್ನಣೆ ಇರಲಿ

‘ಮಜಾ ಟಾಕೀಸ್’ನಲ್ಲಿ ಸೃಜನ್ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದಾರೆ. ಅದಕ್ಕೆ ಎಲ್ಲ ಕನ್ನಡಿಗರೂ ಛೀಮಾರಿ ಹಾಕಬೇಕು. ಇಲ್ಲಿಯ ತನಕ ಹೊಸ ಸಿನಿಮಾದ ನಟ ನಟಿಯರನ್ನು ಕರೆದುಕೊಂಡು ಬಂದು ಅವರಿಂದ ಆಟ ಆಡಿಸಿ 50 ಸಂಚಿಕೆ ಆಯಿತೆನ್ನಿಸಿದ ಭೂಪ!

‘ಕಾಮಿಡಿ ಟಾಕೀಸ್’ನಲ್ಲಿ ವಿನಾಟಕೀಯ ನಿರೂಪಣೆ ನೋಡಲಾಗದು. ಇದನ್ನು ನಿಲ್ಲಿಸಬೇಕು. ಇದರ ಜತೆಗೆ ಈಗಿನ ಕಾಲದಲ್ಲಿಯೂ ಹುಡುಗರಿಂದ ಹುಡುಗಿಯರ ಪಾತ್ರ ಮಾಡಿಸುತ್ತಿರುವುದಕ್ಕೆ ದಿಕ್ಕಾರವಿರಲಿ! ಹುಡುಗಿಯರಿಗೆ ಅವಕಾಶ ನೀಡಬೇಕು.

—ಎಂ. ಸುಬ್ಬಣ್ಣ, ಬೆಂಗಳೂರು

## ಅದೇ ಹಾದಿಗೆ ‘ಜೊತೆ ಜೊತೆಯಲಿ’

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಜೊತೆ ಜೊತೆಯಲಿ’ ಧಾರಾವಾಹಿ ಮೊದಮೊದಲು ಭರವಸೆ ಹುಟ್ಟಿಸಿ, ಕ್ರಮೇಣ ಇದೂ ಸಹ ವೀಕ್ಷಕರಿಗೆ ಬೇಸರ ಹುಟ್ಟಿಸುತ್ತಿದೆ. ಡಿ.31ರಂದು ಪ್ರಸಾರವಾದ ಸಂಚಿಕೆಯಂತೂ ವೀಕ್ಷಕರ ಸಹನೆ ಪರೀಕ್ಷಿಸುವಂತಿತ್ತು. ನಾಯಕಿ ಅನು ಸಿರಿಮನೆ ಹುಬ್ಬಳ್ಳಿಗೆ ವರ್ಗವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವಾಗ, ನಾಯಕ ಆರ್ಯವರ್ಧನ್ ಬಸ್ಸನ್ನು ಹಿಂಬಾಲಿಸಿ ಅನುವನ್ನು ಬಸ್ಸಿನಲ್ಲಿ ಭೇಟಿಯಾಗಿ ಅವಳನ್ನು ವಾಪಸ್ಸು ಬರುವಂತೆ ಪರಿ ಪರಿಯಾಗಿ ಬೇಡಿಕೊಳ್ಳುತ್ತಾರೆ. ಆದರೆ ಅನು ನಿರಾಕರಿಸುತ್ತಾಳೆ. ಅನು ಪಾತ್ರಧಾರಿಯ ಅಭಿನಯವಂತೂ ಅಸಹನೀಯ ಮತ್ತು ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುವಂತಿದೆ. ಬದಲಾಗಿ ನಾಯಕ, ನಾಯಕಿ ತಾವು ಏನು ಹೇಳಬೇಕೋ ಅದನ್ನು ನೇರವಾಗಿ ಹೇಳಬಹುದಾಗಿತ್ತಲ್ಲವೇ? ಆಗರ್ಭ ಶ್ರೀಮಂತನಾದ ಆರ್ಯವರ್ಧನ್ ಒಂದು ಹೆಣ್ಣಿಗಾಗಿ ಈ ರೀತಿ ವರ್ತಿಸುವುದು ಅಸಹನೀಯ.

—ಎಸ್. ರವೀಂದ್ರನಾಥ, ಬೆಂಗಳೂರು

## ವಿಜ್ಞಾನಕ್ಕಿಲ್ಲ ಮನ್ನಣೆ

ಸೌರ ವಿದ್ಯಮಾನದ ಪ್ರಕ್ರಿಯೆಯ ವೈಜ್ಞಾನಿಕ ಸತ್ಯ ಕಂಕಣ ಸೂರ್ಯ ಗ್ರಹಣದ ಬಗ್ಗೆ ಕನ್ನಡ ನ್ಯೂಸ್ ಚಾನಲ್‌ಗಳು ದಿನಗಟ್ಟಲೆ ಭವಿಷ್ಯ, ಶುಭ, ಅಶುಭ, ಶಾಂತಿ, ಪರಿಹಾರ ಪೂಜೆ, ಹೋಮ, ಗ್ರಹಣ, ಗ್ರಹಚಾರ ಎಂದೆಲ್ಲ ವೀಕ್ಷಕರನ್ನು ಹೆದರಿಸಿದ್ದು! ಎಂತಹ ಕಂಕಣ ವಿಪರ್ಯಾಸ. ನ್ಯೂಸ್ ಚಾಲನ್‌ಗಳು ಜ್ಯೋತಿಷಿಗಳಿಗೆ ನೀಡಿದ ಪ್ರಾಮುಖ್ಯತೆಯನ್ನು ವಿಜ್ಞಾನಿಗಳಿಗೆ, ವೈಚಾರಿಕ ವ್ಯಕ್ತಿಗಳಿಗೆ ನೀಡಲಿಲ್ಲ!

ರಾಷ್ಟ್ರ ಹಾಗೂ ರಾಜ್ಯಕ್ಕೆ ಇನ್ನು ಮೂರು ತಿಂಗಳು ಗ್ರಹಣ ಗಂಡಾಂತರ! ಎನ್ನುವ ಭವಿಷ್ಯ, ರಾಜಕಾರಣಿಗಳ ಗ್ರಹಣ ಶಾಂತಿ ಪೂಜೆ, ಹೋಮದ ಪ್ರಸಾರ ಪ್ರಚಾರದ ವೈಭವೀಕರಣ ಸಮಾಜಕ್ಕೆ ಯಾವ ಸಂದೇಶ ನೀಡಲಿದೆ? ವಿಜ್ಞಾನ, ತಂತ್ರಜ್ಞಾನ ಸಹಾಯದಿಂದ ಕಂಕಣ ಸೂರ್ಯ ಗ್ರಹಣವನ್ನು ನೇರ ಪ್ರಸಾರ ಮಾಡಿದ ನ್ಯೂಸ್ ಚಾನಲ್‌ಗಳು ಇದನ್ನು ಮರೆತು ಗ್ರಹಣದ ಮೂಢನಂಬಿಕೆಗಳನ್ನು ವೈಭವೀಕರಿಸಿದ್ದು ಎಂತಹ ಕಂಕಣ ವಿಪರ್ಯಾಸ. ನ್ಯೂಸ್ ಚಾನಲ್‌ಗಳಿಗೆ ವೈಜ್ಞಾನಿಕ ಕಂಕಣ ಮಾಡಿಸುವವರು ಯಾರು?

—ಕಾಡನೂರು ರಾಮಶೇಷ, ಹುಲಿಮಂಗಲ

## ಮತ್ತೆ ಪ್ರಸಾರ ಮಾಡಿ...

ಕಲರ್ಸ್ ಸೂಪರ್‌ನ ‘ಸಿಲ್ಲಿ ಲಲ್ಲಿ’ ಮತ್ತು ‘ಪಾಪ ಪಾಂಡು’ ಮನಗೆದ್ದಿವೆ. ಕೆಲವೊಮ್ಮೆ ನೋಡಲು ಸಮಯ ಅನುಕೂಲವಾಗುವುದಿಲ್ಲ. ಆದ್ದರಿಂದ ದಯವಿಟ್ಟು ರವಿವಾರ ಮರು ಪ್ರಸಾರ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ ಹಾಸ್ಯ ಧಾರಾವಾಹಿಗಳನ್ನು ಎಷ್ಟು ಸಲ ನೋಡಿದರೂ ಮನಸ್ಸಿಗೆ ಖುಷಿ ಕೊಡುತ್ತದೆ ಅಲ್ಲವೆ? ದಯವಿಟ್ಟು ವಾಹಿನಿಗಳು ಗಮನಿಸುವಂತಾಗಲಿ.

—ಎಸ್. ನರೇಂದ್ರ ನಾಯಕ್, ಗಂಗೊಳ್ಳಿ

## ಸ್ತ್ರೀ ಸಂಕುಲಕ್ಕೆ ಕಳಂಕ

ಉದಯ ಟೀವಿಯ ‘ಕಸ್ತೂರಿ ನಿವಾಸ’ದಲ್ಲಿ ಮನೆಗೆ ಹೊಸದಾಗಿ ಮದುವೆಯಾಗಿ ಬಂದ ಮಗ ಸೊಸೆಯನ್ನು ತನ್ನ ಮೊಮ್ಮಗಳನ್ನು ಸೊಸೆಯಾಗಿ ಮಾಡಿಕೊಳ್ಳಲಿಲ್ಲವೆಂದೂ, ಅತ್ತೆ ಬಾಗಿಲಿನಲ್ಲೇ ಅವರನ್ನು ನಿಲ್ಲಿಸಿ, ಹೃದಯವಂತನಾದ ಮಾವ ಆರತಿ ತಂದರೂ ಅದನ್ನು ಆರಿಸಿ, ಮದುಮಗಳನ್ನು ಮಾರಿ, ಪಿಶಾಚಿ, ಬೀದಿಯಲ್ಲಿ ಬಿದ್ದಿರಬೇಕಾದವಳು, ‘ಭಿಕ್ಷುಕಿ’ ಎಂದೆಲ್ಲಾ ಹೀನಾಯವಾಗಿ ಅವಾಚ್ಯ ಶಬ್ದಗಳಿಂದ ಬಯ್ಯುತ್ತಾಳೆ. ಅವಳ ಮಗಳೂ ತನ್ನ ಅಮ್ಮ ತನ್ನ ಮಗಳನ್ನು ಸೊಸೆಯಾಗಿ ಮಾಡಿಕೊಳ್ಳಲಿಲ್ಲವೆಂದೂ ತನ್ನ ಮಾತಾಪಿತರ ಫೋಟೊವನ್ನೇ ಒಡೆಯಲು ಹೋಗುತ್ತಾಳೆ. ಇಂತಹ ದೃಶ್ಯಗಳನ್ನು ನೋಡುತ್ತಿದ್ದರೆ ಈ ಹೆಂಗಸರು ಹೆಣ್ಣಿನ ಕುಲಕ್ಕೇ ಕಳಂಕ.

—ಶರ್ಮಿಷ್ಠಾವೇದಗರ್ಭ, ಬೆಂಗಳೂರು

## 2000 ರೂಪಾಯಿ ನೋಟುಗಳು

ನ್ಯೂಸ್ ಚಾನಲ್‌ಗಳಿಗೂ 2000 ಕರೆನ್ಸಿ ನೋಟುಗಳಿಗೂ ಎಣ್ಣೆ—ಶೀಗೇಕಾಯಿ ಸಂಬಂಧ ಇದ್ದಂತೆ ಕಾಣುತ್ತದೆ. 2016ರ ನೋಟು ರದ್ದತಿಯ ನಂತರ ಮೋದಿಯವರು ಶೀಘ್ರದಲ್ಲಿಯೇ ಇನ್ನೊಂದು ಬಾಂಬ್ ಹಾಕಲಿದ್ದು, ಕೆಲವೇ ದಿನಗಳಲ್ಲಿ 2000 ಕರೆನ್ಸಿ ನೋಟುಗಳನ್ನು ರದ್ದು ಮಾಡಲಿದ್ದಾರೆಂದು ಘಂಟಾಘೋಷವಾಗಿ ಹೇಳುತ್ತಾರೆ. ಕೆಲವು ಚಾನೆಲ್‌ಗಳಂತೂ ನಿರ್ದಿಷ್ಟ ದಿನವನ್ನೂ ಹೇಳುವ ಸಾಹಸ ಮಾಡುತ್ತವೆ. ಆ ದಿನದಂದು ಅಂತಹ ಕ್ರಮ ಜರುಗದಿದ್ದರೆ ಇನ್ನೊಂದು ದಿನಾಂಕವನ್ನು ನಿಗದಿ ಪಡಿಸುತ್ತಾರೆ. ಕಳೆದ ಆರು ತಿಂಗಳಲ್ಲಿ ಅದೆಷ್ಟು ಬಾರಿ ಈ ರೀತಿ ಹೇಳಿದ್ದಾರೋ ತಿಳಿಯದು. ಕಾಕತಾಳೀಯ ಎನ್ನುವಂತೆ 2000 ರೂಪಾಯಿ ನೋಟುಗಳ ಮುದ್ರಣ ನಿಂತಿದೆ ಎನ್ನುವ ಕೆಲವು ಮಾಧ್ಯಮದ ವರದಿ ಇಂತಹ ವದಂತಿಗಳಿಗೆ ಅಧಿಕೃತತೆಯ ಲೇಪ ಕೊಡುತ್ತವೆ.

ಇಂತಹ ಸುದ್ದಿಗಳು ಸಾಕಷ್ಟು ಗೊಂದಲ ಉಂಟು ಮಾಡುತ್ತಿವೆ ಮತ್ತು ಸಂಬಂಧಪಟ್ಟ ಸರ್ಕಾರದ ಇಲಾಖೆಗಳು ಈ ನಿಟ್ಟಿನಲ್ಲಿ ಸ್ಪಷ್ಟೀಕರಣ ನೀಡಿ ಸುಸ್ತಾಗುತ್ತಿವೆ. ಇಂತಹ ವಿಷಯಗಳಲ್ಲಿ ಟಿವಿ ಚಾನೆಲ್‌ಗಳು ಹೆಚ್ಚು ಹೊಣೆಗಾರಿಕೆ ಮತ್ತು ಬದ್ಧತೆ ತೋರಿಸಬೇಕು.

—ರಮಾನಂದ ಶರ್ಮಾ, ಬೆಂಗಳೂರು

## ಬರೀ ಕಿಲಾಡಿ

ಈ ಕಾರ್ಯಕ್ರಮದಲ್ಲಿ ಕಾಮಿಡಿ ಇಲ್ಲವೇ ಇಲ್ಲ. ಸನ್ನಿವೇಶಗಳು, ಸಂಭಾಷಣೆ, ಪಾತ್ರಗಳು, ನಟನೆ ಎಲ್ಲವೂ ಅತ್ಯಂತ ಬಾಲಿಶವಾಗಿವೆ. ಪುರುಷರ ಸ್ತ್ರೀಪಾತ್ರ ಅಸಹ್ಯವೆನಿಸುತ್ತದೆ. ನಟರ ಬಗ್ಗೆ ಹೇಳುವುದೇ ಬೇಡ. ಅದೇ ಹಳಬರೇ ನಟಿಸುತ್ತಿದ್ದಾರೆ. ಇವರಿಗೆ ನಟನೆಯಲ್ಲಿ ಮುಖಚರ್ಯೆ, ಸಂಭಾಷಣೆಯಲ್ಲಿ ಸೂಕ್ತ ಏರಿಳಿತ, ಸ್ವಚ್ಛ ಉಚ್ಚಾರಣೆ ಅತಿ ಮುಖ್ಯ ಎಂಬ ಅರಿವೇ ಇಲ್ಲ. ಇನ್ನೂ ಆಶ್ಚರ್ಯದ ಸಂಗತಿ ಅಂದರೆ ಈ ಕಾರ್ಯಕ್ರಮದ ತೀರ್ಪುಗಾರರು ಬಿದ್ದುಬಿದ್ದು ನಗುವುದು ಏಕೆ?

—ಶ್ರೀನಾಥ್ ಕೋನೇಟಿ.

## ಆನಂದನಿಗೆ ಸಿಕ್ಕ ನ್ಯಾಯ

ಕಲರ್ಸ್‌ನ ‘ಮಗಳು ಜಾನಕಿ’ಯಲ್ಲಿ ಆನಂದ್ ಬೆಳ್ಳೂರ್ ಪಾತ್ರ ಮೊದಲಿನಿಂದಲೂ ವೀಕ್ಷಕರಲ್ಲಿ ಆಸಕ್ತಿ ಕೆರಳಿಸಿದೆ. ಅದಕ್ಕೆ ಸರಿಯಾದ ಪೋಷಣೆ ಸಿಕ್ಕಿರಲಿಲ್ಲ. ಈ ವಾರ ನಮ್ಮ ಕಲ್ಪನೆಗೂ ಮೀರಿ ಈ ಪಾತ್ರ ನಮ್ಮನ್ನು ಕಟ್ಟಿಹಾಕಿತು. ಮಂಗಳಕ್ಕನ ಮಾತು. ಕೇಳಿ ಚಂಚಲ ಆನಂದರ ವಿವಾಹಕ್ಕೆ ಬುನಾದಿ ಹಾಕಲು ಆನಂದನೊಡನೆ ಜಾನಕಿ ನಡೆಸಿದ ಸಂಭಾಷಣೆಯ ಭಾಗ ಈ ವಾರದ highlight. ಇಬ್ಬರ ಅಭಿನಯವೂ ಉತ್ತಮ . ಮಾತಿನಲ್ಲಿಯೇ ತನ್ನ ಕೋಪ ಅಸಮಾಧಾನವನ್ನು ಕಕ್ಕುವ ಆನಂದನ ಮಾತುಗಳಲ್ಲಿ ಸತ್ವಾಂಶವಿದೆ. ಅವನು ಮಾತುಗಳಲ್ಲೇ ಚುಚುತ್ತಿದ್ದರೆ ಜಾನಕಿ ಮೌನವಾಗಿ ತನ್ನ ನೋವು, ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದ ರೀತಿ ಅದ್ಭುತವಾಗಿತ್ತು. ಮದುವೆ ಮುರಿದು ಹೋಗಿದ್ದರೆ ಪೋಷಕರು ಮದುವೆಗೆ ಅವಸರ ಮಾಡಬಾರದು ಎನ್ನುವ ಸಂದೇಶವೂ ಅದರಲ್ಲಿ ಇತ್ತು.

—ಎಸ್. ಚಂದ್ರಕಾಂತ